**CCE PF**
**CCE PR**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2017

**S. S. L. C. EXAMINATION, MARCH / APRIL, 2017**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 07. 04. 2017 ] ಸಂಕೇತ ಸಂಖ್ಯೆ : **83-K (Bio.)**

Date : 07. 04. 2017 ] CODE No. : **83-K (Bio.)**

## ವಿಷಯ : ವಿಜ್ಞಾನ

## Subject : SCIENCE

**(ಜೀವಶಾಸ್ತ್ರ / Biology)**

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ + ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh + Private Repeater)**

[ ಗರಿಷ್ಠ ಅಂಕಗಳು : 100

[ Max. Marks : 100

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಮಾರ್ಜಕಗಳ ಬಳಕೆ ಜಲಚರ ಜೀವಿಗಳಿಗೆ ಮಾರಕವಾಗಿದೆ. ಏಕೆಂದರೆ, ಅವು<br>***ಉತ್ತರ :*** (A) — ನೀರಿನಲ್ಲಿ ವಿಲೀನವಾಗಿರುವ ಆಕ್ಸಿಜನ್ ಪ್ರಮಾಣವನ್ನು ಕುಗ್ಗಿಸುತ್ತವೆ. | 1 |
| 6. | ಒಬ್ಬ ವಿದ್ಯಾರ್ಥಿ ಶಾಲಾ ಆವರಣದಲ್ಲಿ ದೊರೆತ ಒಂದು ಹೂವನ್ನು ಏಕದಳ ಸಸ್ಯದ ಹೂವು ಎಂದು ನಿರ್ಧರಿಸುತ್ತಾನೆ. ಅವನ ಈ ತೀರ್ಮಾನಕ್ಕೆ ಕಾರಣ<br>***ಉತ್ತರ :*** (C) — ಹೂವಿನ ದಳಗಳು ಮೂರರ ಗುಣಿತದಲ್ಲಿರುತ್ತವೆ. | 1 |
| 8. | ಸೊಳ್ಳೆಗಳನ್ನು ನಿರ್ಮೂಲನ ಮಾಡುವುದರಿಂದ ಈ ರೋಗಗಳನ್ನು ನಿಯಂತ್ರಿಸಬಹುದು.<br>*ಉತ್ತರ :* (D) — ಚಿಕುನ್‌ಗುನ್ಯ, ಡೆಂಗ್ಯೂ ಜ್ವರ | 1 |
| 10. | ಮುಂದಿನ ಸಂತಾನಗಳಿಗೆ ಒಂದೇ ರೀತಿಯ ಆನುವಂಶೀಯ ವಸ್ತುವನ್ನು ಸಮನಾಗಿ ಹಂಚಲು ಕಾರಣವಾದ ಡಿಎನ್‌ಎ ಯ ವಿಶಿಷ್ಟ ಗುಣ<br>***ಉತ್ತರ :*** (C) — ಸ್ವ-ಪ್ರತೀಕರಣ | 1 |
| 14. | ಒಬ್ಬ ಪಳೆಯುಳಿಕೆ ಶಾಸ್ತ್ರಜ್ಞ ಪ್ರಾಣಿಯೊಂದರ ದವಡೆಯನ್ನು ಗಮನಿಸಿ ಅದು ಸ್ತನಿಗಳಿಗೆ ಸೇರಿದೆ ಎಂದು ತೀರ್ಮಾನಿಸುತ್ತಾನೆ. ಅವನ ತೀರ್ಮಾನಕ್ಕೆ ಕಾರಣ ತಿಳಿಸಿ.<br>***ಉತ್ತರ :*** ಸ್ತನಿಗಳಲ್ಲಿ ಹಲವು ಬಗೆಯ ಹಲ್ಲುಗಳಿವೆ (ಭಿನ್ನದಂತಿ) ಹಾಗೂ ದವಡೆಯ ಮೂಳೆಗಳಲ್ಲಿ ಹುದುಗಿಕೊಂಡಿವೆ. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 17. | ಕಣ್ಣಿನ ಪಾಪೆಗೆ ಸಂಬಂಧಿಸಿದಂತೆ ಅನುವೇದನಾ ವ್ಯೂಹ ಹಾಗೂ ಪ್ಯಾರಾಅನುವೇದನಾ ವ್ಯೂಹದ ಕಾರ್ಯವನ್ನು ತಿಳಿಸಿ.<br>*ಉತ್ತರ :*<br>ಅನುವೇದನಾವ್ಯೂಹದ ಸಂದೇಶದಿಂದ ಕಣ್ಣುಪಾಪೆಯು ವಿಶಾಲವಾದರೆ, ಪ್ಯಾರಾ ಅನುವೇದನಾವ್ಯೂಹದ ಸಂದೇಶದಿಂದ ಕಣ್ಣುಪಾಪೆಯು ಸಂಕುಚಿಸುತದೆ. ½ + ½ | 1 |
| 21. | ವಾಯುಮಾಲಿನ್ಯಕ್ಕೆ ಕಾರಣವಾದ ವಿವಿಧ ಆಕರಗಳ ಶೇಕಡಾ ಪ್ರಮಾಣವನ್ನು ಕೋಷ್ಟಕದಲ್ಲಿ ನೀಡಲಾಗಿದೆ. ಅದರ ಸಹಾಯದಿಂದ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : | |

| *ವಾಯುಮಾಲಿನ್ಯದ ಆಕರಗಳು* | *ಕೈಗಾರಿಕೆ* | *ಸಾರಿಗೆ* | *ಗ್ರಾಹಕ ಮತ್ತು ವಾಣಿಜ್ಯ ಉತ್ಪನ್ನಗಳು* | *ವಾಣಿಜ್ಯ ಮತ್ತು ಗೃಹಬಳಕೆ ವಿದ್ಯುತ್* | *ಕೃಷಿ* | *ಇತರೆ* |
|---|---|---|---|---|---|---|
| ಶೇಕಡಾ ಪ್ರಮಾಣ | 52% | 27% | 8% | 1% | 10% | 2% |

a) ವಾಯುಮಾಲಿನ್ಯದ ನಿಯಂತ್ರಣಕ್ಕಾಗಿ ಹೆಚ್ಚು ಗಮನ ನೀಡಬೇಕಾದ ಎರಡು ಆಕರಗಳು ಯಾವುವು ?

b) ಆ ಎರಡು ಆಕರಗಳಿಂದ ಉಂಟಾಗುವ ಮಾಲಿನ್ಯವನ್ನು ನಿಯಂತ್ರಿಸಲು ಕೈಗೊಳ್ಳಬೇಕಾದ *ಒಂದೊಂದು* ಕ್ರಮವನ್ನು ತಿಳಿಸಿ.

*ಉತ್ತರ :*

a) i) ಕೈಗಾರಿಕೆ ½

ii) ಸಾರಿಗೆ ½

b) *ಕೈಗಾರಿಕೆ :*

i) ಕೈಗಾರಿಕೆಗಳಿಂದ ಹೊರಬರುವ ತ್ಯಾಜ್ಯಗಳನ್ನು ಪರೀಕ್ಷಿಸುವುದು ಮತ್ತು ನಿಯಂತ್ರಿಸುವುದು.

ii) ನಗರ ಹಾಗೂ ಪಟ್ಟಣಗಳಿಂದ ದೂರದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದು.

iii) ವಾಯುಮಾಲಿನ್ಯಕ್ಕೆ ಸಂಬಂಧಿಸಿದ ಕಾನೂನು ಕಟ್ಟಳೆಗಳನ್ನು ತಪ್ಪದೇ ಪಾಲಿಸುವುದು.
(ಯಾವುದಾದರೂ ಒಂದು) ½

*ಸಾರಿಗೆ :*

i) ವಾಹನಗಳನ್ನು ನಿಯಮಿತವಾಗಿ ಪರೀಕ್ಷೆಗೆ ಒಳಪಡಿಸುವುದು

ii) ಇಂಜಿನ್ನಿನ ದಕ್ಷತೆಯನ್ನು ಹೆಚ್ಚಿಸುವುದು

iii) ಸೀಸರಹಿತ ಪೆಟ್ರೋಲ್ ಮತ್ತು ಜೈವಿಕ ಇಂಧನ ಬಳಸುವುದು

iv) ಸಾರ್ವಜನಿಕ ಸಾರಿಗೆ ವ್ಯವಸ್ಥೆ ಬಳಸುವುದು (ಯಾವುದಾದರೂ ಒಂದು) ½

(ಇತರೆ ಯಾವುದೇ ಸೂಕ್ತ ಉತ್ತರ) 2

24. ಸ್ನಾಯುರಜ್ಜು ಮತ್ತು ಅಸ್ಥಿರಜ್ಜುಗಳ ನಡುವಣ ವ್ಯತ್ಯಾಸಗಳನ್ನು ಬರೆಯಿರಿ.


*ಉತ್ತರ :*

| **ಸ್ನಾಯುರಜ್ಜು** | **ಅಸ್ಥಿರಜ್ಜು** |
|---|---|
| i) ಸ್ನಾಯುಗಳನ್ನು ಮೂಳೆಗಳಿಗೆ ಜೋಡಿಸಲು ಸಹಾಯಕವಾಗಿವೆ. | i) ಮೂಳೆಗಳನ್ನು ಒಂದಕ್ಕೊಂದು ಬಂಧಿಸಲು ನೆರವಾಗುತ್ತವೆ. |
| ii) ಹೆಚ್ಚಿನ ಪ್ರಮಾಣದ ಕೊಲ್ಯಾಜಿನ್ ತಂತುಗಳನ್ನು ಹೊಂದಿವೆ. | ii) ಹೆಚ್ಚಿನ ಪ್ರಮಾಣದ ಇಲಾಸ್ಟಿಕ್ ತಂತುಗಳನ್ನು ಹೊಂದಿವೆ. |

2

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

27. ಸಸ್ಯ ಅಂಗಾಂಶವೊಂದರ ನೀಳಛೇದ ನೋಟದ ಚಿತ್ರವನ್ನು ಕೆಳಗೆ ನೀಡಲಾಗಿದೆ. '*A*' ಎಂದು ಗುರುತಿಸಲಾಗಿರುವ ಭಾಗವನ್ನು ಹೆಸರಿಸಿ ಮತ್ತು ಅದರ ಕಾರ್ಯವನ್ನು ತಿಳಿಸಿ. ಈ ಅಂಗಾಂಶದ ಇತರ ಘಟಕಗಳನ್ನು ಹೆಸರಿಸಿ.




*ಉತ್ತರ :*

★ *A* → ಜರಡಿ ತಟ್ಟೆ / ಜರಡಿ ತಟ್ಟೆಯಲ್ಲಿರುವ ರಂಧ್ರಗಳು ½

★ ಕಾರ್ಯ : ಆಹಾರ ಸಾಗಾಣಿಕೆ ½

★ ಇತರ ಘಟಕಗಳು :

i) ಸಂಗಾತಿ ಜೀವಕೋಶಗಳು


ii) ಫ್ಲೋಯಂ ನಾರು

iii) ಫ್ಲೋಯಂ ಪೇರಂಕೈಮ

iv) ಜರಡಿ ನಾಳ (ಯಾವುದಾದರೂ ಎರಡು) 2 × ½ **2**


30. ಹೆಚ್.ಐ.ವಿ. ರಚನೆಯನ್ನು ತೋರಿಸುವ ಚಿತ್ರವನ್ನು ಬರೆಯಿರಿ.

*ಉತ್ತರ :*



**2**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 32. | ಬಹುಗುಣಿತ ಸಸ್ಯಗಳು ಎಂದರೇನು ? ಅವುಗಳ ಇತಿಮಿತಿಗಳನ್ನು ತಿಳಿಸಿ.<br>*ಅಥವಾ*<br>ಆಹಾರ ಸಂಸ್ಕರಿಸುವಾಗ ಪ್ರತಿ ಉತ್ಕರ್ಷಕಗಳು ಹಾಗೂ ವರ್ಣಕಾರಕಗಳನ್ನು ಉಪಯೋಗಿಸುವುದರಿಂದ ಆಗುವ ಅನುಕೂಲತೆಗಳನ್ನು ತಿಳಿಸಿ.<br>*ಉತ್ತರ :*<br>ಎರಡಕ್ಕಿಂತ ಹೆಚ್ಚಿನ ವರ್ಣತಂತು ಗುಂಪುಗಳಿರುವ ಸಸ್ಯಗಳಿಗೆ ಬಹುಗುಣಿತ ಸಸ್ಯಗಳೆನ್ನುತ್ತಾರೆ. 1<br>*ಇತಿಮಿತಿಗಳು :*<br>ಬೆಳವಣಿಗೆ ಬಹಳ ನಿಧಾನ ½<br>ಫಲವತ್ತತೆ ಕಡಿಮೆ ½ | 2 |
| | *ಅಥವಾ*<br>i) ಆಹಾರ ಪದಾರ್ಥದಲ್ಲಿರುವ ಕೊಬ್ಬು ಅಥವಾ ತೈಲವು ಕೆಟ್ಟವಾಸನೆ ಪಡೆಯುವುದನ್ನು ತಡೆಯಲು ಪ್ರತಿ ಉತ್ಕರ್ಷಕಗಳನ್ನು ಬಳಸುತ್ತಾರೆ.<br>ii) ಆಹಾರ ಸಂಸ್ಕರಿಸುವಾಗ ನಾಶವಾಗುವ ಬಣ್ಣವನ್ನು ಮತ್ತೆ ಒದಗಿಸಲು ವರ್ಣಕಾರಕಗಳನ್ನು ಬಳಸುತ್ತಾರೆ. 1 + 1 | 2 |
| 34. | ಮಾನವನ ವಿಕಾಸದ ಹಂತದಲ್ಲಿ ಆತನ ನೇರ ನಿಲುವಿಗೆ ಕಾರಣವಾದ ದೈಹಿಕ ಬದಲಾವಣೆಗಳು ಯಾವುವು ?<br>*ಅಥವಾ*<br>ಆಸ್ಟ್ರಲೋಪಿಥಿಕಸ್ ಮಾನವನ ಯಾವುದಾದರೂ ನಾಲ್ಕು ದೈಹಿಕ ಲಕ್ಷಣಗಳನ್ನು ತಿಳಿಸಿ.<br>*ಉತ್ತರ :*<br>i) ಬಲಿಷ್ಠವಾದ ಹಾಗೂ ನೇರವಾದ ಕಾಲುಗಳ ಜೊತೆಗೆ ನಡೆಯಲು ಪೂರಕವಾದ ಪಾದಗಳ ಬೆಳವಣಿಗೆ.<br>ii) ಮುಂಗಾಲು (ಕೈ) ಗಳನ್ನು ಹಿಡಿಯಲು ಮತ್ತು ಬೇರೆ ಬೇರೆ ಉದ್ದೇಶಗಳಿಗೆ ಬಳಸಲಾರಂಭಿಸಿರುವುದು.<br>iii) ಸೊಂಟದ ಮೂಳೆ ಮತ್ತು ಸ್ನಾಯುಗಳಲ್ಲಿ ಉಂಟಾದ ಬದಲಾವಣೆಗಳು.<br>iv) ಸೊಂಟದ ಉದರ ಭಾಗಕ್ಕೆ ಆಧಾರ ನೀಡುವ ಸಲುವಾಗಿ ನಡುಕಟ್ಟು ಅಗಲವಾದ ಬೇಸಿನ್ ರೂಪಕ್ಕ ಬದಲಾಯಿತು.<br>v) ತಲೆ ಚಿಪ್ಪಿನಿಂದ ಮಿದುಳು ಹೊರಬರುವ ರಂಧ್ರವು ಕೆಳಭಾಗಕ್ಕೆ ಸ್ಥಳಾಂತರಗೊಂಡಿರುವುದು.<br>(ಯಾವುದಾದರೂ ನಾಲ್ಕು ಮಾತ್ರ) 4 × ½ | 2 |
| | *ಅಥವಾ* | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | i) ಈತ ಕುಳ್ಳಗಿದ್ದು, ಸುಮಾರು ನಾಲ್ಕುವರೆ ಅಡಿ ಎತ್ತರ ಹೊಂದಿದ್ದ.<br>ii) ಹಣೆಯ ಭಾಗ ಚಿಕ್ಕದಾಗಿದೆ.<br>iii) ನೆಟ್ಟಗೆ ಚಲಿಸಬಲ್ಲವನಾಗಿದ್ದ.<br>iv) ತನಗಿಂತ ಎತ್ತರವಾದ ಗೋರಿಲ್ಲಾಗಳಿಗೆ ಇರುವಷ್ಟೇ ಮಿದುಳಿನ ಸಾಮರ್ಥ್ಯ ಹೊಂದಿದ್ದ.<br>v) ಮಿದುಳು ಪೆಟ್ಟಿಗೆಯ ಗಾತ್ರ ಆಧುನಿಕ ಮಾನವನಿಗಿಂತ ಮೂರನೇ ಒಂದರಷ್ಟು ಇದೆ.<br>(ಯಾವುದಾದರೂ ನಾಲ್ಕು ಮಾತ್ರ) $4 \times \frac{1}{2}$ | 2 |
| 37. | ನರಕೋಶದ (ನ್ಯೂರಾನ್) ರಚನೆಯನ್ನು ತೋರಿಸುವ ಚಿತ್ರವನ್ನು ಬರೆಯಿರಿ.<br>***ಉತ್ತರ :***<br> | 2 |
| 40. | ಉಷ್ಣಮಾಲಿನ್ಯ ಎಂದರೇನು ? ಉಷ್ಣಮಾಲಿನ್ಯವನ್ನು ನಿಯಂತ್ರಿಸುವ ಕ್ರಮವನ್ನು ತಿಳಿಸಿ.<br>***ಉತ್ತರ :***<br>★ ಅಧಿಕ ತಾಪದ ನೀರನ್ನು ಜಲಮೂಲಗಳಿಗೆ ಸೇರಿಸುವುದನ್ನು ಉಷ್ಣ ಮಾಲಿನ್ಯ ಎನ್ನುವರು. 1<br>★ ಅಧಿಕ ತಾಪದ ನೀರನ್ನು ಹೊರಬಿಡುವ ಮುನ್ನ ವಾತಾವರಣದ ತಾಪಕ್ಕೆ ಇಳಿಸಬೇಕು. 1 | 2 |
| 43. | ಹಕ್ಕಿಜ್ವರ ತಡೆಗಟ್ಟುವ ವಿಧಾನಗಳನ್ನು ತಿಳಿಸಿ.<br>***ಉತ್ತರ :***<br>i) ಸೋಂಕಿತ ಪ್ರದೇಶಗಳಲ್ಲಿರುವ ಹಕ್ಕಿ ಮಾರುಕಟ್ಟೆಗಳಿಗೆ ಪ್ರವಾಸಿಗರು ಹೋಗಬಾರದು.<br>ii) ಹಕ್ಕಿಗಳ ಜೊತೆ ಸಂಪರ್ಕ ಇರುವವರು ರಕ್ಷಣಾತ್ಮಕ ಉಡುಗೆಯ ಜೊತೆಗೆ ನಾಸಿಕದ ಮುಸುಕು ಧರಿಸಬೇಕು.<br>iii) ಬೇಯಿಸದ ಹಾಗೂ ಅರೆಬೆಂದ ಹಕ್ಕಿ ಮಾಂಸವನ್ನು ಸೇವಿಸಬಾರದು.<br>(ಯಾವುದಾದರೂ ಎರಡು) 1 + 1 | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 44. | ಪ್ರಾಯಕ್ಕೆ ಮುಂಚೆ ಬೆಳವಣಿಗೆ ಹಾರ್ಮೋನಿನ ಅಸಮರ್ಪಕ ಸ್ರವಿಕೆಯಿಂದಾಗುವ ತೊಂದರೆಗಳನ್ನು ತಿಳಿಸಿ.<br>*ಉತ್ತರ :*<br>i) ಬೆಳವಣಿಗೆ ಹಾರ್ಮೋನು ಮಿತಿ ಮೀರಿ ಉತ್ಪತ್ತಿಯಾದರೆ ವ್ಯಕ್ತಿಯು ದೈತ್ಯಗಾತ್ರಕ್ಕೆ ಬೆಳೆಯುತ್ತಾನೆ. ಇದಕ್ಕೆ ದೈತ್ಯತೆ ಎಂದು ಹೆಸರು. 1<br>ii) ಪ್ರಾಯಕ್ಕೆ ಮುಂಚೆ ಬೆಳವಣಿಗೆ ಹಾರ್ಮೋನು ಉತ್ಪತ್ತಿಯಾದರೆ ವ್ಯಕ್ತಿಯು ಕುಳ್ಳನಾಗುತ್ತಾನೆ. ಇದಕ್ಕೆ ಕುಬ್ಜತೆ ಎಂದು ಹೆಸರು. 1 | 2 |
| 47. | (a) ಹಕ್ಕಿಗಳಲ್ಲಿ ಹಾರುವುದಕ್ಕೆ ಇರುವ ಯಾವುದಾದರೂ ನಾಲ್ಕು ಪ್ರಮುಖ ಹೊಂದಾಣಿಕೆಗಳನ್ನು ತಿಳಿಸಿ.<br>(b) ಒಳ ಕಂಕಾಲ ವ್ಯವಸ್ಥೆಯ ಸಂಯೋಜನೆಯ ಆಧಾರದಲ್ಲಿ ಮೀನುಗಳ ಎರಡು ಪ್ರಮುಖ ಗುಂಪುಗಳನ್ನು ಹೆಸರಿಸಿ.<br>*ಉತ್ತರ :*<br>a) i) ದೋಣಿಯಾಕಾರದ ದೇಹ.<br>ii) ರೆಕ್ಕೆಗಳಾಗಿ ಮಾರ್ಪಟ್ಟಿರುವ ಮುಂಗಾಲುಗಳು.<br>iii) ಮೇಲೇರಲು ಸಹಾಯಕವಾಗುವಂತೆ ರೆಕ್ಕೆಗಳ ಮೇಲೆ ವಿಶಿಷ್ಟವಾದ ಗರಿಗಳ ಹೊದಿಕೆ.<br>iv) ಹಾರಾಡುವುದಕ್ಕೆ ಅನುಗುಣವಾದ ಸ್ನಾಯುಗಳು.<br>v) ದೇಹದ ತೂಕದಲ್ಲಿ ಗಣನೀಯ ಇಳಿಕೆ.<br>vi) ಗಾಳಿಯಿಂದ ತುಂಬಿದ ವಾಯುವಿಕ ಮೂಳೆಗಳು.<br>vii) ಹಲ್ಲುಗಳ ಬದಲಾಗಿ ಕೊಕ್ಕು ಇರುವುದು.<br>viii) ಶ್ವಾಸಕೋಶಗಳಲ್ಲಿ ಹೆಚ್ಚಿನ ಗಾಳಿ ಸಂಗ್ರಹಿಸಲು ನೆರವಾಗುವ ಗಾಳಿ ಚೀಲಗಳು.<br>(ಯಾವುದಾದರೂ ನಾಲ್ಕು ಮಾತ್ರ) $4 \times \frac{1}{2}$<br>b) i) ಮೃದ್ವಸ್ಥಿ ಮೀನುಗಳು $\frac{1}{2}$<br>ii) ಮೂಳೆ (ಅಸ್ಥಿ) ಮೀನುಗಳು $\frac{1}{2}$ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|
| 49. | ಡಿಎನ್ಎ ಅಣುವಿನ ದ್ವಿಸುರುಳಿ ರಚನೆಯನ್ನು ವಿವರಿಸಿ. | | |
| | *ಅಥವಾ* | | |
| | ಕಾರ್ಲ್ ಕಾರೆನ್ಸ್‌ರ ಸಂಜೆಮಲ್ಲಿಗೆ ಸಸ್ಯದಲ್ಲಿನ ಏಕತಳೀಕರಣದ ಸಂಕರಣ ಪ್ರಯೋಗವನ್ನು ನಕಾಶಾ ನಿರೂಪಣೆಯೊಂದಿಗೆ ವಿವರಿಸಿ. $F_2$ ಪೀಳಿಗೆಯಲ್ಲಿ ದೊರೆಯುವ ಸಸ್ಯಗಳ ವ್ಯಕ್ತರೂಪ ಅನುಪಾತ ಹಾಗೂ ಜೀನ್ ನಮೂನೆಯ ಅನುಪಾತ ತಿಳಿಸಿ. | | |
| | ***ಉತ್ತರ :*** | | |
| | i) ಡಿಎನ್ಎ ಅಣುವು ಸುರುಳಿ ಸುತ್ತಿಕೊಂಡಿರುವ ಒಂದು ಏಣಿಯಂತಿದೆ. | ½ | |
| | ii) ಒಂದು ಜೋಡಿ ಪಾಲಿನ್ಯೂಕ್ಲಿಯೋಟೈಡ್‌ನಿಂದಾದ ಸರಪಳಿಗಳು ಒಂದಕ್ಕೊಂದು ಹೆಣೆದುಕೊಂಡು ವಿರುದ್ಧ ದಿಕ್ಕಿನಲ್ಲಿ ಸಮಾನಾಂತರವಾಗಿ ನುಲಿದಿವೆ. | ½ | |
| | iii) ಪ್ರತಿ ನ್ಯೂಕ್ಲಿಯೋಟೈಡ್‌ಗಳು – ಡಿಆಕ್ಸಿರೈಬೋಸ್ ಸಕ್ಕರೆ, ಫಾಸ್ಫೇಟ್ ಮತ್ತು ನೈಟ್ರೋಜನ್ ಕ್ಷಾರಗಳನ್ನು ಹೊಂದಿವೆ. | ½ | |
| | iv) ಡಿಎನ್ಎ ಏಣಿಯ ಎರಡು ಕಂಬಗಳು ಪರ್ಯಾಯವಾಗಿ ಪೆಂಟೋಸ್ ಸಕ್ಕರೆ ಮತ್ತು ಫಾಸ್ಫೇಟುಗಳಿಂದ ಮಾಡಲ್ಪಟ್ಟಿವೆ. | | |
| | v) ನೈಟ್ರೋಜನ್ ಕ್ಷಾರಗಳು ಎದುರುಬದುರಿನ ಕಂಬಗಳನ್ನು ಮೆಟ್ಟಿಲುಗಳಂತೆ ಸೇರಿಸುತ್ತವೆ. | ½ | |
| | vi) ನೈಟ್ರೋಜನ್ ಕ್ಷಾರಗಳಲ್ಲಿ ಪ್ಯೂರಿನ್ ಮತ್ತು ಪಿರಿಮಿಡೀನ್‌ಗಳೆಂಬ ಎರಡು ವಿಧಗಳಿವೆ. ಅಡಿನೈನ್ (A) ಯಾವಾಗಲೂ ಥೈಮಿನ್ (T) ಜೊತೆಯಲ್ಲಿ ಮತ್ತು ಗ್ವಾನಿನ್ (G) ಯಾವಾಗಲೂ ಸೈಟೋಸಿನ್ (C) ಜೊತೆಯಲ್ಲಿ ಜೋಡಣೆಯಾಗಿರುತ್ತದೆ. | 1 | 3 |
| | *ಅಥವಾ* | | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|

ಹೂವಿನ ಕೆಂಪು ಬಣ್ಣಕ್ಕೆ ಕಾರಣವಾದ ಅಂಶ = $R$

ಹೂವಿನ ಬಿಳಿ ಬಣ್ಣಕ್ಕೆ ಕಾರಣವಾದ ಅಂಶ = $W$

ಪಿತೃಪೀಳಿಗೆ = ಶುದ್ಧ ಕೆಂಪು ಹೂ ಬಿಡುವ ಸಸ್ಯ ಹಾಗೂ ಶುದ್ಧ ಬಿಳಿ ಹೂ ಬಿಡುವ ಸಸ್ಯ

ಪಿತೃಪೀಳಿಗೆ : RR ಮತ್ತು WW

ಲಿಂಗಾಣುಗಳು : R W

ಪರಕೀಯ ಪರಾಗಸ್ಪರ್ಶ 1

$F_1$ ಪೀಳಿಗೆ ⟶ RW

(ಎಲ್ಲಾ ಗುಲಾಬಿ ಬಣ್ಣದ ಹೂಬಿಡುವ ಸಸ್ಯಗಳು)

ಸ್ವಕೀಯ ಪರಾಗಸ್ಪರ್ಶ

$F_2$ ಪೀಳಿಗೆ ⟶ RR RW RW WW

(1 ಕೆಂಪು, 2 ಗುಲಾಬಿ, 1 ಬಿಳಿ ಹೂಬಿಡುವ ಸಸ್ಯಗಳು)

(ಅಥವಾ $F_2$ ಪೀಳಿಗೆಗೆ ಚೆಕ್ಕರ್ ಬೋರ್ಡ್ ಬರೆದರೆ 1 ಅಂಕ ನೀಡುವುದು) 1


ವ್ಯಕ್ತರೂಪದ ಅನುಪಾತ = 1 : 2 : 1 ½

ಜೀನ್ ನಮೂನೆ ಅನುಪಾತ = 1 : 2 : 1 ½ 3

52. ಮಾನವನ ಕಣ್ಣಿನ ನೀಳಛೇದ ನೋಟವನ್ನು ತೋರಿಸುವ ಚಿತ್ರವನ್ನು ಬರೆದು, ಕೆಳಗಿನ ಭಾಗಗಳನ್ನು ಗುರುತಿಸಿ :

(a) ಮಸೂರ (b) ಹಳದಿ ಪ್ರದೇಶ

***ಉತ್ತರ :***




ಚಿತ್ರಕ್ಕೆ 3

ಪ್ರತಿ ಸರಿಯಾದ ಭಾಗಕ್ಕೆ 2 × ½ 4